

## ಕುಡಿತ ಬಿಟ್ಟಿದ್ದು

‘ನಾನು ಸರಾಯಿ
ಕುಡಿಯೋದನ್ನು ಬಿಟ್ಟು ಬಿಟ್ಟೆ’
ಎಂದು ಎಂಕ ಸಂತೋಷದಿಂದ
ಹೇಳಿಕೊಂಡ.
‘ಯಾಕೆ ಸರಾಯಿ
ಕುಡಿಯುವುದು ಕೆಟ್ಟದ್ದು
ಎಂದೇ?’ ಎಂದು ಗೆಳೆಯ
ಸೋಮು ಪ್ರಶ್ನಿಸಿದ್ದಕ್ಕೆ ಎಂಕ,
‘ಅಲ್ಲ, ಅದಕ್ಕಲ್ಲ ಮಾರಾಯ
ಸರಾಯಿ ಕುಡಿದಾಗ ಸತ್ಯವನ್ನೇ
ಹೇಳಬೇಕಾಗುತ್ತದಲ್ಲ. ಅದಕ್ಕೆ...’

**ದೇವಿದಾಸ ಸುವರ್ಣ**

## ಮೇಕಪ್

ದೊಡ್ಡ ಬಂಗಲೆಯ ಗೇಟು ದಾಟಿ
ಹೊರಗೆ ಬರುತ್ತಿರುವ ಕಾರಿನೊಳಗಿದ್ದ
ನಿರ್ಮಾಪಕನನ್ನು ತಡೆದಳು ಕಾಮಿನಿ.
‘ನೋಡಿದ್ರಾ? ನಿಮ್ಮ ಸಿನಿಮಾ
ಹೀರೋಯಿನ್ ಅಲ್ವಾ ನಾನು.
ನಿಮ್ಮ ವಾಚ್‌ಮನ್ ನಿಮ್ಮ
ಬಂಗಲೆಯ ಒಳಗೆ ಹೋಗಲಿಕ್ಕೇ
ಬಿಡಲಿಲ್ಲ. ಇದೇನಾ ನೀವು ನನಗೆ
ಕೊಡುವ ಮರ್ಯಾದೆ?’ ಎಂದು
ಕೋಪದಿಂದ ಕೇಳಿದಳು.
‘ನೀನಾ? ನನ್ನ ಪುಣ್ಯ! ಮೇಕಪ್
ಇಲ್ದಿದ್ರೆ ನಾನೇ ನಿನ್ನ ಗುರುತು
ಹಿಡಿಯೋಕೆ ಆಗಲಿಲ್ಲ! ಇನ್ನು ಅವನು
ಹೇಗೆ ನಿನ್ನನ್ನು ಗುರುತಿಸುತ್ತಾನೆ!’

**ರಾಮಪ್ರಸಾದ ಬಿ.,
ಹೊಸಪೇಟೆ**



ಚಿತ್ರಗಳು: ಗಣೇಶ ಆಚಾರ್ಯ